ನಡೆಯುತ್ತಿದ್ದು ಅವುಗಳ ವಿತರಣೆ ನಂತರ ತಾತ್ಕಾಲಿಕವಾಗಿ ತಡೆಹಿಡಿಯಲಾದ ಪ್ರಕ್ರಿಯೆಯನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದು.

ಈ) ಮೊಬೈಲ್ ಫೋನ್ ಹೊಂದದೇ ಇರುವವರು ಹತ್ತಿರದ ಅರ್ಜಿ ಕೇಂದ್ರಗಳಾದ ಗ್ರಾಮ ಪಂಚಾಯಿತಿ ಕಛೇರಿ, ತಾಲ್ಲೂಕು ಕಛೇರಿ, ಬೆಂಗಳೂರು ಒನ್/ಕರ್ನಾಟಕ ಒನ್ ಕೇಂದ್ರಗಳಲ್ಲಿ ಎಪಿಕ್/ಆಧಾರ್ ಸಂಖ್ಯೆಗಳನ್ನು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಉ) ಈಗಾಗಲೇ ಮೇಲಿನಂತೆ ಕ್ರಮ ಕೈಗೊಂಡಿರುವದರಿಂದ ಈ ಕಾರ್ಯವನ್ನು ನ್ಯಾಯಬೆಲೆ ಅಂಗಡಿಗಳಿಗೆ ವಹಿಸುವ ಅಗತ್ಯವಿರುವುದಿಲ್ಲ.

ಮೈಸೂರಿನಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಫ್ಲೈ ಬಸ್ ಸೌಕರ್ಯ

275 (1068), ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಮೈಸೂರಿನಿಂದ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಫ್ಲೈ ಬಸ್ ಸೌಕರ್ಯ ಒದಗಿಸಲಾಗಿದೆಯೇ;

ಆ) ಪ್ರತಿದಿನ ಎಷ್ಟು ಬಾರಿ ಈ ಬಸ್ ಸಂಚಾರ ಒದಗಿಸಲಾಗಿದೆ; ಹಾಗೂ ಪ್ರಯಾಣ ದರವೆಷ್ಟು;

ಇ) ಪ್ರತಿ ಟ್ರಿಪ್‌ಗೆ ತಗಲುವ ಅಂದಾಜು ವೆಚ್ಚವೆಷ್ಟು; ಹಾಗೂ ಪ್ರಯಾಣಿಕರ ಸಂಖ್ಯೆ ಎಷ್ಟು;

ಈ) ಈ ಫ್ಲೈ ಬಸ್ ಲಾಭಾಯಕವಾಗಿದೆಯೇ;

ಉ) ಈ ಫ್ಲೈ ಬಸ್‌ಗೆ ತಗುಲಿದೆ ವೆಚ್ಚವೆಷ್ಟು;

ಊ) ಈ ಬಸ್ ಸಂಚಾರ ನಷ್ಟದಲ್ಲಿದ್ದರೆ, ಪ್ರತಿದಿನ ಅಂದಾಜು ಎಷ್ಟು ನಷ್ಟವಾಗುತ್ತಿದೆ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಹೌದು.

ಆ) ಮೈಸೂರಿನಿಂದ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಎರಡು ದುಂಡು ಸುತ್ತುವಳಿಗಳ ಪ್ಲೈ ಬಸ್ ಸಂಚಾರವನ್ನು ಕೆಳಕಂಡ ಸಮಯದಲ್ಲಿ ಒದಗಿಸಲಾಗಿದೆ.

ಹೊರಡುವ ಸ್ಥಳ	ನಿರ್ಗಮನ ವೇಳೆ
ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ	10.30 & 21.00
ಮೈಸೂರು	15.00 & 01.00

ಪ್ರಸ್ತುತ ವಯಸ್ಕರಿಗೆ ₹ 800/– ಮತ್ತು ಮಕ್ಕಳಿಗೆ ₹ 600/– ಪ್ರಯಾಣದರ ನಿಗಧಿಪಡಿಸಲಾಗಿದೆ.

ಇ) ಪ್ರತಿ ಟ್ರಿಪ್‌ಗೆ ತಗಲುವ ಅಂದಾಜು ವೆಚ್ಚ ₹ 10,00/– ಹಾಗೂ ಪ್ರತಿ ಟ್ರಿಪ್‌ನಲ್ಲಿ ಸರಾಸರಿ 11 ಜನ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.

ಈ) ಇಲ್ಲ

ಉ) ಈ ಪ್ಲೈ ಬಸ್‌ಗೆ ತಗುಲುವ ವೆಚ್ಚ ₹ 928.26 ಲಕ್ಷಗಳು.

ಊ) ಈ ಹಿಂದೆ ಪ್ರತಿದಿನ ಸರಾಸರಿಯಾಗಿ ಅಂದಾಜು ₹ 4,00/– ನಷ್ಟವಾಗುತ್ತಿತ್ತಾದರೂ ಫೆಬ್ರವರಿ 2014ರಿಂದ ಲಾಭದಾಯಕವಾಗಿರುತ್ತದೆ.